ಕರಡು

## ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ–8814/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 27/01/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಬಸನಗೌಡ ಬಾಪುಗೌಡ ಪಾಟೀಲ್, ಹೊನ್ನೂಟಗಿ ಅಂಚೆ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ಬಸನಗೌಡ ಬಾಪುಗೌಡ ಪಾಟೀಲ್ ಇವರು ಈ ಸಂಸ್ಥೆಗೆ ದೂರೊಂದನ್ನು ನೀಡಿ ವಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಕಣಕಾಲ ಗ್ರಾಮದ ಶ್ರೀ ಮಡಿವಾಳೇಶ್ವರ ವಿದ್ಯಾವರ್ಧಕ ಸಂಘವು ಸಾಥಿಹಾಳ ಗ್ರಾಮದಲ್ಲಿ ನ್ಯೂ ಹೈಸ್ಕೂಲ್ ಮತ್ತು ಬಾಲವಿಕಾಸ ಮಂದಿರ, ಕನ್ನಡ ಹಿರಿಯ ಪ್ರಾಥಮಿಕ ಶಾಲೆ ನಡೆಸುತ್ತಿರುವುದಾಗಿ ತಿಳಿಸಿ, ಅದಕ್ಕಾಗಿ ಅನುದಾನ ಬಿಡುಗಡೆ ಮಾಡಬೇಕೆಂದು ಸಲ್ಲಿಸಿದ ಅರ್ಜಿಯ ಪ್ರಕಾರ, ಈ ಪ್ರಕರಣದ ಎದುರುದಾರರಾದ ವಿಜಾಪುರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಶ್ರೀಶೈಲ ಬಿರಾದರ್ ಇವರು ಸದರಿ ಶಾಲೆಗೆ ಭೇಟಿ ಕೊಟ್ಟು ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಶ್ರೀ ಮಡಿವಾಳೇಶ್ವರ ವಿದ್ಯಾವರ್ಧಕ ಸಂಸ್ಥೆಯು ನಡೆಸುತ್ತಿರುವ ನ್ಯೂ ಹೈಸ್ಕೂಲ್ ಮತ್ತು ಬಾಲವಿಕಾಸ ಮಂದಿರ, ಕನ್ನಡ ಹಿರಿಯ ಪ್ರಾಥಮಿಕ ಶಾಲೆಗೆ ಸ್ವಂತ ನಿವೇಶನ ಹಾಗೂ ಕಟ್ಟಡ ಇರುವುದಾಗಿ ಸುಳ್ಳು ಮಾಹಿತಿಯನ್ನು ನೀಡಿರುತ್ತಾರೆ. ಹಾಗೆಯೇ ಸದರಿ ಶಾಲೆಗೆ ಎಲ್ಲ ಮೂಲಭೂತ ಸೌಕರ್ಯಗಳು, ವಿಶಾಲವಾದ ಆಟದ ಮೈದಾನವು ಮತ್ತು ಮಕ್ಕಳಿಗೆ ವರ್ಗಾವಾರು ಪ್ರತ್ಯೇಕ ಕೊಠಡಿಗಳು ಇರುತ್ತವೆ ಎಂದು ಮಾಹಿತಿ ನೀಡಿರುತ್ತಾರೆ. ಆದರೆ, ಸದರಿ ಶಾಲೆಗೆ ಸ್ವಂತ ನಿವೇಶನವೇ ಇರುವುದಿಲ್ಲ ಹಾಗೂ ವಿಶಾಲವಾದ ಆಟದ ಮೈದಾನವು ಸಹ ಇರುವುದಿಲ್ಲ. ಆದ್ದರಿಂದ, ಎದುರುದಾರರು ಸುಳ್ಳು ಮಾಹಿತಿಯನ್ನು ನೀಡಿ ಸರ್ಕಾರದ ವತಿಯಿಂದ ಸದರಿ ಶಾಲೆಗೆ ಅನುದಾನ ಬಿಡುಗಡೆ ಮಾಡಲು ಸಹಕರಿಸಿದ್ದು, ಇದರಿಂದ ಸರ್ಕಾರಕ್ಕೆ ನಷ್ಟ ಉಂಟಾಗಿರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಪ್ರಕರಣವು ಅಂತಿಮ ಪರಿಶೀಲನೆಗೆ ಎಂದು ನಿಗದಿಗೊಂಡಿದ್ದು, ನಿಗದಿಗೊಂಡ ನಂತರದ ದಿನದಲ್ಲಿ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಸದರಿ ಆಕ್ಷೇಪಣೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ ಪಿಎಂಸಿ 2006 ದಿ:06/10/2007 ಹಾಗೂ ಆದೇಶ ಸಂಖ್ಯೆ: ಇಡಿ 217 ಪಿಎಂಸಿ 2008 ದಿ: 08/09/2008 ರಂತೆ 1994–95ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಅಧಿಕೃತವಾಗಿ ಪ್ರಾರಂಭಿಸಿದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಸಹಾಯ ಅನುದಾನ ಮಂಜೂರು ಮಾಡಲು ಆಸ್ಪದ ಕಲ್ಪಿಸಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ: ಇಡಿ 542 ಎಸ್‌ಇಎಸ್ 1994 ದಿ: 06/07/1994 ರಂತೆ ಶ್ರೀ ಮಡಿವಾಳೇಶ್ವರ ವಿದ್ಯಾವರ್ಧಕ ಸಂಘ, ಕಣಕಾಲ, ಬಸವನಬಾಗೇವಾಡಿ ತಾಲ್ಲೂಕು, ವಿಜಾಪುರ ಜಿಲ್ಲೆ ವತಿಯಿಂದ ಸಾಥಿಹಾಳ ಗ್ರಾಮ ಇಲ್ಲಿ ಕನ್ನಡ ಮಾಧ್ಯಮದಲ್ಲಿ ಪ್ರೌಢಶಾಲೆ ತೆರೆಯಲು ಅನುಮತಿ ನೀಡಲಾಗಿದ್ದು, ಇದರಂತೆ ಶಾಲೆ ಪ್ರಾರಂಭಿಸಲಾಗಿರುತ್ತದೆ. ಸದರಿ ಪ್ರೌಢಶಾಲೆಯನ್ನು ಸಹಾಯ ಅನುದಾನಕ್ಕೆ ಒಳಪಡಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 517 ಯೋಯೋಕ 2009 ದಿ: 28/01/2010 ರಂತೆ ದಿ:21/08/2014 ರಂದು ತಾನು ಸದರಿ ಶಾಲೆಗೆ ಭೇಟಿ ಇತ್ತು ತಪಾಸಣೆ ಮಾಡಿದ್ದು, ತಪಾಸಣಾ ಕಾಲದಲ್ಲಿ ದಾಖಲೆಗಳಿಂದ ಕಂಡು ಬಂದ ಅಂಶಗಳೇನೆಂದರೆ ಪ್ರೌಢಶಾಲೆಯನ್ನು 1994–95ನೇ ಸಾಲಿನಲ್ಲಿ ಪ್ರಾರಂಭಿಸಲಾಗಿರುತ್ತದೆ. ಆಡಳಿತ ಮಂಡಳಿಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ್ದು, ಸದರಿ ಶಾಲೆಯು ಗ್ರಾಮದ ಸರ್ವೇ ನಂ. 11/2 ರ 2 ಎಕರೆ 39 ಗುಂಟೆ ವಿಸ್ತೀರ್ಣದ ಜಾಗದಲ್ಲಿ ಇದ್ದು, ಶಾಲಾ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ. ಶ್ರೀ ದಾಮು ಗ ನಾಯಕ ಇವರ ಹೆಸರಿನಲ್ಲಿ ಜಾಗದ ದಾಖಲೆಗಳು ಇರುವುದಾಗಿ ಕಂಡು ಬಂದಿರುತ್ತದೆ. ತಾವು ಸಂದರ್ಶಿಸಿದ ಕಾಲದಲ್ಲಿ ಹಾಜರುಪಡಿಸಿದ ದಾಖಲೆಯಿಂದ ಶ್ರೀ ದಾಮು ಗ ನಾಯಕ ಇವರು ಶಾಲೆ ಇದ್ದ ಜಾಗ ಶ್ರೀ ದಾಮು ಗ. ನಾಯಕ ಇವರ ಹೆಸರಿನಲ್ಲಿ ಇದ್ದಿದ್ದು ಕಂಡು ಬಂದಿರುತ್ತದೆ. ಆದರೆ, ಸದರಿ ಜಾಗವನ್ನು ಮಾರಾಟ ಮಾಡಿರುವ ವಿಷಯವನ್ನು ಶ್ರೀ ದಾಮು ನಾಯಕ ಇವರು ಮುಚ್ಚಿಟ್ಟಿದ್ದು, ಇಲಾಖೆಗೆ ಮೋಸ ಮಾಡಿರುತ್ತಾರೆ. ಆದ್ದರಿಂದ, ಸದರಿ ಶ್ರೀ ದಾಮು ನಾಯಕ ಇವರು ಸರ್ವೇ ನಂ.11/2 ರಲ್ಲಿ ಶಾಲೆಗೆ ಎಂದು ಇದ್ದ ಜಾಗವನ್ನು ಮಾರಾಟ ಮಾಡಿರುತ್ತಾರೆ. ಈ ಮಾರಾಟ ಮಾಡಿರುವ ವಿಚಾರ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

3. ಪ್ರಕರಣದ ದೂರುದಾರರು ನೀಡಿದ ದೂರಿನನ್ವಯ ದಾಖಲೆಗಳನ್ನು ಪರಿಶೀಲಿಸಲಾಗಿ ಸಾಥಿಹಾಳ ಗ್ರಾಮದ ಸರ್ವೇ ನಂ.11/2ರ 2 ಎಕರೆ 39 ಗುಂಟೆ ವಿಸ್ತೀರ್ಣದ ಜಮೀನನ್ನು ದಿ:31/10/2008 ರಂದು ದಸ್ತು ಸಂಖ್ಯೆ: 2565ರ ಪ್ರಕಾರ ಶ್ರೀಮತಿ ಸಿದ್ದುಬಾಯಿ ಉರಫ್ ಸುಜಾತ ಪತಿ ಹಣುಮಂತರಾಯ ಮಣ್ಣೂರ ಇವರಿಗೆ ಖರೀದಿಗೆ ನೀಡಿರುವುದು ಕಂಡು ಬಂದಿರುತ್ತದೆ. ಆದ್ದರಿಂದ, ಸರ್ಕಾರಿ ಆದೇಶ

ಸಂಖ್ಯೆ: ಇಡಿ 39 ಎಲ್‌ಬಿಪಿ 2013 ಬೆಂಗಳೂರು ದಿ:29/05/2014 ರಂತೆ 31ನೇ ಷರತ್ತು ಪ್ರಕಾರ ಶಾಲಾ ಆಡಳಿತ ಮಂಡಳಿಯು ತಪ್ಪು ದಾಖಲೆಗಳನ್ನು ಒದಗಿಸಿದರೆ 31ನೇ ಷರತ್ತಿನಂತೆ ಕ್ರಮ ಜರುಗಿಸಲು ದಾಖಲೆಗಳನ್ನು ಆಡಳಿತ ಮಂಡಳಿಯಿಂದ ಪಡೆದು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ.

4. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಶ್ರೀ ಮಡಿವಾಳೇಶ್ವರ ವಿದ್ಯಾವರ್ಧಕ ಸಂಘವು ಸಾಥಿಹಾಳ ಗ್ರಾಮದಲ್ಲಿ ನ್ಯೂ ಹೈಸ್ಕೂಲ್ ಮತ್ತು ಬಾಲವಿಕಾಸ ಮಂದಿರ, ಕನ್ನಡ ಹಿರಿಯ ಪ್ರಾಥಮಿಕ ಶಾಲೆಯನ್ನು ನಡೆಸುತ್ತಿರುವುದು ಕಂಡು ಬರುತ್ತದೆ. ಸದರಿ ಶಾಲೆಯ ವತಿಯಿಂದ ಅನುದಾನ ಕೋರಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ಬಗ್ಗೆ ಎದುರುದಾರರ ಕಛೇರಿಯಲ್ಲಿ ಕಡತವನ್ನು ನಿರ್ವಹಿಸಿ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ. ಸದರಿ ಟಿಪ್ಪಣಿಯ 38ನೇ ಕಂಡಿಕೆಯಲ್ಲಿ "ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಕಂಡಿಕೆ 34 ರಲ್ಲಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು (ಜಿಲ್ಲಾ ಪಂಚಾಯತಿ, ವಿಜಾಪುರ) ನೀಡಿದ ನಿರ್ದೇಶನದಂತೆ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ವಿಜಾಪುರ ಇವರು ಶಾಲೆಯನ್ನು ಸಂದರ್ಶಿಸಿ (ಪ್ರಕರಣದ ಎದುರುದಾರರು) ನ್ಯೂ ಹೈಸ್ಕೂಲ್ ಸಾಥಿಹಾಳ ತಾಲ್ಲೂಕು ಬಸವನಬಾಗೇವಾಡಿ, ಜಿಲ್ಲೆ ವಿಜಾಪುರ, ಈ ಶಾಲೆಯಲ್ಲಿ 6 ಶಿಕ್ಷಕರು ಹಾಗೂ ಒಬ್ಬರನ್ನು ಬೋಧಕೇತರ ಸಿಬ್ಬಂದಿ ಇದ್ದು ಭವಿಷ್ಯಾವತಿಯಾಗಿ ಜಾರಿಗೆ ಬರುವಂತೆ ಸಹಾಯ ಅನುದಾನಕ್ಕೆ ಒಳಪಡಿಸಿ ಹೊರಡಿಸಿದ ಸರ್ಕಾರದ ಆದೇಶ ಸಂಖ್ಯೆ:ಇಡಿ/39/ಎಲ್‌ಬಿಪಿ/2013 ಬೆಂಗಳೂರು ದಿ: 29/05/2014 ರಲ್ಲಿಯ 33 ಷರತ್ತುಗಳ ಪೈಕಿ ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದ ಷರತ್ತುಗಳನ್ನು ಹೊರತುಪಡಿಸಿ ಉಳಿದ ಷರತ್ತುಗಳಿಗೆ ಛಾಪಾ ಕಾಗದದ ಮೇಲೆ ಸದರಿ ಸಂಸ್ಥೆಯ ಅಧ್ಯಕ್ಷರಿಂದ ಮುಚ್ಚಳಿಕೆ ಪತ್ರ ಪಡೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

5. ಇದಲ್ಲದೇ, ಸದರಿ ಶಾಲೆಯಲ್ಲಿ 8 ರಿಂದ 10ನೇ ತರಗತಿಯವರೆಗೆ ಕ್ಲಾಸುಗಳು ನಡೆಯುತ್ತಿವೆ, ಎಲ್ಲ ಶಿಕ್ಷಕರು ಇದ್ದು ಅವರ ಕಾರ್ಯ ತೃಪ್ತಿಕರವಾಗಿರುತ್ತದೆ. ಅಲ್ಲದೇ, ಕೆಲಸದ ಹೊರೆಯು ನಿಯಮಾನುಸಾರವಿರುತ್ತದೆ. ಸಂಸ್ಥೆಯ ಹೆಸರಿನಲ್ಲಿದ್ದ ನಿವೇಶನದಲ್ಲಿಯೇ ಕಟ್ಟಡ ಕಟ್ಟಿಸಿರುತ್ತಾರೆ. ಮಕ್ಕಳ ದಾಖಲಾತಿ 96 ಇದ್ದು ಹಾಜರಾತಿ 77 ಇರುತ್ತದೆ. ಅನುಮೋದಿತ ಶಿಕ್ಷಕರು ನಿಗಧಿತ ವಯೋಮಿತಿ ಹೊಂದಿರುತ್ತಾರೆ ಹಾಗೂ ನಿಗಧಿತ ವಿದ್ಯಾರ್ಹತೆ ಹೊಂದಿರುತ್ತಾರೆ. ಸದರಿ ಶಾಲೆಯು ಎಲ್ಲ ಮೂಲಭೂತ ಸೌಕರ್ಯಗಳನ್ನು ಹೊಂದಿರುತ್ತದೆ. ಸದರಿ ಶಾಲೆಗೆ ವಿಶಾಲವಾದ ಆಟದ ಮೈದಾನವಿರುತ್ತದೆ. ಮಕ್ಕಳಿಗೆ ವರ್ಗಾವಾರು ಪ್ರತ್ಯೇಕ ಕೋಣೆಗಳು ಇರುತ್ತವೆ ಎಂದು ತಿಳಿಸಿ ಅನುದಾನಕ್ಕೆ ಶಿಫಾರಸ್ಸು ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ದಾಖಲೆಯನ್ನು ಹಾಜರುಪಡಿಸಲಾಗಿದೆ. ಆದರೆ, ಶ್ರೀ ದಾಮು ಗ ನಾಯಕ

ಇವರು ಸಾಥಿಹಾಳ ಗ್ರಾಮದ ಸರ್ವೇ ನಂ.11 ರ 2 ಎಕರೆ 39 ಗುಂಟೆ ಜಮೀನನ್ನು ದಿ:13/12/2013 ರಂದು ಶ್ರೀಮತಿ ಸರೋಜ ಇವರಿಗೆ ಖರೀದಿಗೆ ನೀಡಿರುವುದು ಕಂಡು ಬರುತ್ತದೆ. ಸದರಿ ಖರೀದಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಆದ್ದರಿಂದ; ಸದರಿ ಶಾಲೆಗೆ ಸ್ವಂತ ಜಾಗ ಇರಲಿಲ್ಲವೆಂದು ಸ್ಪಷ್ಟ ಪಡುತ್ತದೆ.

6. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾವು ಸಂದರ್ಶನ ನೀಡಿದ ದಿ:12/12/2012 ರಂದು ಶ್ರೀ ಮಡಿವಾಳೇಶ್ವರ ವಿದ್ಯಾವರ್ಧಕ ಸಂಘದವರು ಶಾಲೆಯ ಕಟ್ಟಡಕ್ಕೆ ಮತ್ತು ಆಟದ ಮೈದಾನಕ್ಕೆ ಸ್ಥಳ ಇರುವ ಬಗ್ಗೆ ಶ್ರೀ ದಾಮು ಗ ನಾಯಕ ಇವರು ಸರ್ವೇ ನಂ.11/2ರ ಜಮೀನಿನಲ್ಲಿ 2 ಎಕರೆ 39 ಗುಂಟೆ ವಿಸ್ತೀರ್ಣದ ಜಮೀನನ್ನು ದಾನ ಪತ್ರದ ಮುಖೇನ ಶ್ರೀ ಮಡಿವಾಳೇಶ್ವರ ವಿದ್ಯಾವರ್ಧಕ ಸಂಘ ಇವರಿಗೆ ದಾನ ನೀಡಿದ್ದು, ಸದರಿ ದಾನ ಪತ್ರದ ಅನುಮೋದನೆಗೋಸ್ಕರ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದಾಗಿ ವಿದ್ಯಾಸಂಸ್ಥೆಯವರು ತಿಳಿಸಿದರು. ಆದರೆ, ಸದರಿ ಜಾಗವನ್ನು ಶ್ರೀ ದಾಮು ಗ ನಾಯಕ ಇವರು ಶ್ರೀಮತಿ ಸುಜಾತ ಇವರಿಗೆ ಮಾರಾಟ ಮಾಡಿರುವ ಬಗೆಗಿನ ವಿಷಯವನ್ನು ಸದರಿ ವಿದ್ಯಾಸಂಸ್ಥೆಯವರು ಮರೆಮಾಚಿರುತ್ತಾರೆ. ಆದ್ದರಿಂದ, ಸದರಿ ವಿಷಯವು ತನ್ನ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ, ಈ ನಿಟ್ಟಿನಲ್ಲಿ ದಾಖಲೆಗಳನ್ನು ಆಡಳಿತ ಮಂಡಳಿಯಿಂದ ಪಡೆದು, ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿರುತ್ತಾರೆ. ಎದುರುದಾರರು ಹಾಜರುಪಡಿಸಿರುವ ದಾನ ಪತ್ರದ ಪ್ರತಿಯನ್ನು ಪರಿಶೀಲಿಸಿದಲ್ಲಿ ಅದು ನೋಂದಾಯಿತ ದಾನ ಪತ್ರವಾಗಿರುವುದಿಲ್ಲ. ಸದರಿ ದಾನ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಮೇಲೆ ಹೇಳಿದ ದಾನ ಪತ್ರದ ಬಗ್ಗೆ ಜಿಲ್ಲಾಧಿಕಾರಿಯವರ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ ಹಾಗೂ ಸದರಿ ಪ್ರಸ್ತಾವನೆಗೆ ಜಿಲ್ಲಾಧಿಕಾರಿಯವರ ಅನುಮೋದನೆ ದೊರೆಕಿದೆಯೇ ಎಂಬುದನ್ನು ಎದುರುದಾರರು ಪರಿಶೀಲಿಸಿರುವುದಿಲ್ಲ ಹಾಗೂ ಜಿಲ್ಲಾಧಿಕಾರಿಯವರಿಂದ ಅನುಮೋದನೆ ಬಂದಿರುವುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ.

7. ಎದುರುದಾರರಾದ ಉಪನಿರ್ದೇಶಕರು ದಿ:21/08/2014 ರಂದು ಸದರಿ ಶಾಲೆಯನ್ನು ಮತ್ತೊಮ್ಮೆ ಸಂದರ್ಶಿಸಿ ವೇತನ ಪ್ರಮಾಣ ಪತ್ರವನ್ನು ಸಲ್ಲಿಸಲು ಚೆಕ್ ಲಿಸ್ಟ್ ಅನ್ನು ಸಲ್ಲಿಸಿರುವುದು ಸ್ಪಷ್ಟ ಪಟ್ಟಿರುತ್ತದೆ. ಇದು ನೋಟ್ ಶೀಟ್ (ಸದರಿ ದಾಖಲೆಯನ್ನು ಹಾಜರುಪಡಿಸಲಾಗಿದೆ) ಪ್ಯಾರಾ 36 ರಲ್ಲಿ ಈ ಬಗ್ಗೆ ಟಿಪ್ಪಣಿ ಇರುತ್ತದೆ. ಆದ್ದರಿಂದ, 2ನೇ ಬಾರಿ ಸಂದರ್ಶನ ನೀಡಿದ್ದಾಗಲೂ ಸಹ ಎದುರುದಾರರು ಸದರಿ ವಿದ್ಯಾಸಂಸ್ಥೆ ಸ್ವಂತ ಜಾಗವನ್ನು ಹೊಂದಿರುವ ಬಗ್ಗೆ ದೃಡಪಡಿಸಿಕೊಳ್ಳದೇ ಹಾಗೂ ಹಿಂದೆ ಸಂದರ್ಶನ ಸಮಯದಲ್ಲಿ ವಿದ್ಯಾಸಂಸ್ಥೆಯವರು ತಿಳಿಸಿದಂತೆ ಜಿಲ್ಲಾಧಿಕಾರಿಯವರಿಂದ ಸದರಿ ದಾನ ಪತ್ರದ ವಹಿವಾಟಿಗೆ ಅನುಮೋದನೆ ಪಡೆಯಲಾಗಿದೆಯೇ ಇಲ್ಲವೇ ಎಂಬುದನ್ನು ದೃಡಪಡಿಸಿಕೊಳ್ಳದೇ

ಎದುರುದಾರರು ಸರ್ಕಾರದಿಂದ ಅನುದಾನ ಮಂಜೂರಾತಿಗೆ ಶಿಫಾರಸ್ಸು ಮಾಡಿರುವುದು ಸ್ಪಷ್ಟ ಪಡುತ್ತದೆ. ಅದರಂತೆಯೇ, ವೇತನ ಅನುದಾನವನ್ನು ಬಿಡುಗಡೆ ಮಾಡಿರುವುದು ಹಾಗೂ ಇದರಿಂದ ಸರ್ಕಾರಕ್ಕೆ ನಷ್ಟ ಉಂಟಾಗಿರುವುದು ಕಂಡು ಬರುತ್ತದೆ. ಆದ್ದರಿಂದ, ಸುಳ್ಳು ಮಾಹಿತಿಯನ್ನು ನೀಡಿ ಅನುದಾನವನ್ನು ಪಡೆದಿರುವ ಸದರಿ ಶಾಲೆಯ ಮೇಲೆ ಎದುರುದಾರರು ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ ಹಾಗೂ ಅನುದಾನದ ಹಣವನ್ನು ಹಿಂಪಡೆಯಲು ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

8. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ವಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಕಣಕಾಲ ಗ್ರಾಮದ ಶ್ರೀ ಮಡಿವಾಳೇಶ್ವರ ವಿದ್ಯಾವರ್ಧಕ ಸಂಘಕ್ಕೆ ನೀಡಲಾಗಿರುವ ಅನುದಾನದ ಮೊತ್ತವನ್ನು ಪರಿಗಣಿಸಿ ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಮೊತ್ತವನ್ನು ಹಿಂಪಡೆಯಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 27/1

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 27/1/17